ಇವರನ್ನು ಕಡ್ಡಾಯ ನಿವೃತ್ತಿಗೊಳಿಸಿದ್ದು ಪುನರ್‌ನೇಮಕ ಮಾಡುವ ಬಗ್ಗೆ ಮತ್ತು ಎರಡನೆಯ ಅರ್ಜಿಯಾದ ಕೊಳ್ಳೇಗಾಲ ತಾಲ್ಲೂಕಿನ ಮಧುವನ ಹಳ್ಳಿಯ ಶ್ರೀಎಸ್. ಬಾಬುರವರಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಬಗ್ಗೆ ಇರುವ ಅರ್ಜಿಗಳನ್ನು ಸದನದ ಮುಂದೆ ತಮ್ಮ ಅನುಮತಿ ಪಡೆದು ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ಶ್ರೀ ಸಿ.ಎಂ. ಲಿಂಗಪ್ಪನವರ ಹೆಸರಿನಲ್ಲಿರುವ ಅರ್ಜಿಯಾದ ಚಿತ್ರದುರ್ಗದ ಅಕ್ಕಮಹಾದೇವಿ ಸಮಾಜ ರಸ್ತೆಯಲ್ಲಿರುವ ಕೋಮಲ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಡಾ|| ಕೋಮಲ ಪಿ.ಹೆಚ್. ಇವರು ಈ ಹಿಂದೆ ಸರ್ಕಾರದ ವಸತಿ ಗೃಹದಲ್ಲಿ ವಾಸಮಾಡುತ್ತಿದ್ದ ಸಂದರ್ಭದಲ್ಲಿ ವಿಧಿಸಲಾದ ದಂಡರೂಪದ ಬಾಡಿಗೆಯನ್ನು ಬಿಡುವ ಕುರಿತು ಇರುವ ಅರ್ಜಿಯನ್ನು ಸದನಕ್ಕೆ ನಾನೇ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

6. ವರದಿಗಳನ್ನೊಪ್ಪಿಸುವುದು.

ಉಪಾಧ್ಯಕ್ಷರು: ಶ್ರೀಎಂ.ಚಂದ್ರಪ್ಪನವರ ಪರವಾಗಿ ನಾನೇ ಅಧೀನ ಶಾಸನ ರಚನಾ ಸಮಿತಿಯ 24ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ ವಿಧಾನಸಭಾ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಶ್ರೀ ಹೆಚ್.ಕೆ.ಕುಮಾರಸ್ವಾಮಿ ಪರವಾಗಿ ಸಭೆಯ ಮುಂದಿಡಲಾದ ರಾಗದ ಪತ್ರಗಳ ಸಮಿತಿಯ 1998-99ನೇ ಸಾಲಿನ 17ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ವರದಿಗಳನ್ನೊಪ್ಪಿಸಲಾಯಿತು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

ಅ) ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ .

ಶ್ರೀ ಚಂದ್ರಶೇಖರ ನಾಯಕ್(ಗೋಕಾಕ್ ವಿಧಾನಸಭೆ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವುದಕ್ಕೆ ನೀರಿಲ್ಲವಾಗಿದೆ. ಹಲವಾರು ಗ್ರಾಮಗಳಲ್ಲಿ ತೆಗೆದ ಬೋರವೆಲ್‌ಗಳಿಗೆ ಹೋದ ವರ್ಷ ಕೂಡ ಹಣ ಕೊಟ್ಟಿಲ್ಲ ಮತ್ತು ಈ ವರ್ಷವು ಕೂಡ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಜಿಲ್ಲಾಮಂತ್ರಿಗಳು 27ನೇ ತಾರೀಖು ಕುಡಿಯುವ ನೀರಿನ ಸಲುವಾಗಿ ಮಿಟಿಂಗ್ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೇಳಿದರೆ ಕೊಡುವುದಕ್ಕೆ ದುಡ್ಡಿಲ್ಲ. ಈಗ ಗೋಕಾಕ್ ತಾಲ್ಲೂಕಿನ ಮಲ್ಲಾಪುರ,ಚಿಲ್ಕಿಬಾವಿ, ಮಕ್ಕಳಗೇರಿ, ಕಡಬಗಟ್ಟಿ, ಈ ಎಲ್ಲಾ ಗ್ರಾಮಕ್ಕೂ ನೀರೂ ಇಲ್ಲ, ಬೋರ್‌ಗಾಡಿಯೂ ಕೂಡ ಬಂದಿಲ್ಲ. ಹೀಗಾದರೆ ಕುಡಿಯುವ ನೀರಿನ ಪರಿಸ್ಥಿತಿ ಹೇಗೆ ಎಂಬುದನ್ನೂ ವಿಚಾರ ಮಾಡಬೇಕು. ನೀರು ಬೇಕೆಂದು ಅಲ್ಲಿ ದುಡ್ಡಿಲ್ಲ, ದುಡ್ಡಿಲ್ಲದಿದ್ದರೆ ಅಲ್ಲಿಗೆ ನೀರಿಲ್ಲ. ಹೀಗಿರುವಾಗ ಕುಡಿಯುವ ನೀರಿಗೆ ಯಾವ ರೀತಿಯಾಗಿ ವ್ಯವಸ್ಥೆಯನ್ನು ಮಾಡುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಇಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೇವೆಂದು ಸಾಮಾನ್ಯವಾಗಿ ಹಿಂದಿನ ದಿವಸ ಮೂರು ಗಂಟೆಯ ಒಳಗಾಗಿ ಅಥವಾ ಅವೊತ್ತಿನ ದಿವಸ ಮುಂಜಾನೆ ಅಥವಾ ಹಿಂದಿನ ದಿವಸದ ಸಾಯಂಕಾಲವೇ ಬರೆದು ಕೊಟ್ಟರಲಾಗುತ್ತದೆ. ಆ ರೀತಿ ಇರುವಾಗ ಸಂಬಂಧಪಟ್ಟ ಮಂತ್ರಿಗಳು ಶೂನ್ಯ ವೇಳೆಯಲ್ಲಿ ಉತ್ತರ ಕೊಡಲು ಇರಬೇಕು. ಮಾನ್ಯ ಪ್ರಕಾಶ್‌ರವರು ಬಂದಿಲ್ಲವೆಂದರೆ ಅವರ ಅಸಿಸ್ಟೆಂಟ್ ಆದ ಶ್ರೀಮನಗೂಳಿಯವರಾದರು ಬಂದು ಉತ್ತರ ಹೇಳಬೇಕು. ಸಂಬಂಧಪಟ್ಟ ಮಂತ್ರಿಗಳು ಹಾಜರಿರ ಬೇಕು ಎನ್ನುವ ದೃಷ್ಟಿಯಿಂದಲೇ ನಾವು ಮೊದಲೇ ವಿಷಯದ ಬಗ್ಗೆ ನೋಟಿಸ್ ಕೊಟ್ಟಿರುತ್ತೇವೆ. ಆ ಮಂತ್ರಿಗಳಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ, ಅವರ ಕಾರ್ಯ ಕ್ರಮ ಏನು ಹಣ ಎಷ್ಟಿದೆ, ಯಾವ ರೀತಿಯಾಗಿ ಬರಗಾಲ ಪೀಡಿತ ಪ್ರದೇಶಗಳಿಲ್ಲಿ ನೀರಿನ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡುತ್ತಾರೆ ಎಂಬುದು ಮಂತ್ರಿಗಳಿಗೆ ಗೊತ್ತಿದ್ದರೂ ಕೂಡ ಮಂತ್ರಿಗಳು ಬರುವುದಿಲ್ಲವೆಂದು ಹೇಗೆ?

ಉಪಾಧ್ಯಕ್ಷರು: ಪ್ರಕಾಶ್‌ರವರ ಆರೋಗ್ಯ ಸ್ವಲ್ಪ ಸರಿಯಿಲ್ಲ.

ಶ್ರೀ ಮಲ್ಲಿಕಾರ್ಜುನಖರ್ಗೆ: ಅವರ ಆರೋಗ್ಯ ಸರಿ ಇಲ್ಲದಿದ್ದಲಿ ಬರುವುದು ಬೇಡ, ಆದರೆ ಅವರಿಗೆ ಅಸಿಸ್ಟೆಂಟ್‌ಆಗಿ ಅಟ್ಯಾಚ್ ಮಾಡಿರುವ ಮಂತ್ರಿಗಳಾದರೂ ಬಂದು ಉತ್ತರ ಕೊಡಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕೇಳತಕ್ಕಂಥ ಪ್ರಶ್ನೆಗಳ ಬಗ್ಗೆ ಬೆಳಿಗ್ಗೆಯೇ ಹೇಳಿರುತ್ತೇವೆ. ಅದಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿದ್ದು ಉತ್ತರ ಕೊಡ ಬೇಕು. ಅವರು ಇಲ್ಲದೇ ಇಲ್ಲಿರುವ ಬೇರೆ ಮಂತ್ರಿಗಳಾದ ಬೈರೇಗೌಡರು ಉತ್ತರ ಹೇಳಿ ಪರಿಶೀಲಿಸುತ್ತೇವೆ ಎಂದು ಹೇಳಿದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ. ಈ ರೀತಿ ನಡೆದುಕೊಂಡರೆ ಹಾಸ್ಯಾಸ್ಪದವಾಗುತ್ತಿದೆ. ಎಷ್ಟು ಬಾರಿ ಹೇಳಿದರೂ ಆಡಳಿತ ಚರ್ಮ ಮಂದವಾಗಿಬಿಟ್ಟಿದೆ. ಹೀಗಾದರೆ ಹೇಗೆ ? ಇದು ಒಳ್ಳೆಯದಲ್ಲ.

ಶ್ರೀ ಕೆ. ಎಸ್, ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಯಾವ ಸೈನ್ಯವನ್ನು ಕರೆಸಿ ಆಡಳಿತ ಪಕ್ಷದವರನ್ನು ಸರಿ ಮಾಡಸಬೇಕೋ ನನಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಡಳಿತ ಪಕ್ಷದವರು ಮಾಡುತ್ತಿರುವುದೇ ಸರಿ ಇದೆ ಎಂದು ಅವರು ಹೇಳಿಕೊಂಡರೆ ನಾವೇನೂ ಮಾಡುವುದಕಾಗುವುದಿಲ್ಲ. ಇದಕ್ಕೆ ಯಾವ ಅರ್ಥವೂ ಇರುವುದಿಲ್ಲ.

ಶ್ರೀ ಸಿ. ಬೈರೇಗೌಡ(ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಾಮಾಣಿಕವಾಗಿ ಹೇಳಿತ್ತಿದ್ದೇನೆ. ಮಂತ್ರಿಗಳ ಹಾಜರಿ ಇಲ್ಲದಿರುವುದು ಸರಿಯಲ್ಲ. ಅದರೂ ಒಂದೊಂದು ಬಾರಿ ಈ ರೀತಿ ಗೈರು ಹಾಜರಿ ಸಂಭವಿಸಿಬಿಡುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದೊಂದು ಬಾರಿ ಅಲ್ಲ. ಅನೇಕ ಬಾರಿ ಆಗಿದೆ. ಪ್ರತಿ ದಿನವು ಮಂತ್ರಿಗಳ ಗೈರು ಹಾಜರಿ ಇದ್ದೇ ಇರುತ್ತದೆ. ಮುಖ್ಯಮಂತ್ರಿಗಳಿಗೆ ಪುರುಸೊತ್ತು

ಇದ್ದರೂ ಕೂಡ ಅವರೂ ಒಂದೊಂದು ಬಾರಿ ಬರುವುದೇ ಇಲ್ಲ. ನಾವು ಅವರಿಗೆ ಪುರುಸೊತ್ತು ಇಲ್ಲ ಎಂದು ತಿಳಿದುಕೊಂಡಿರುತ್ತೇವೆ ಆದರೆ ಕೆಲವು ಬಾರಿ ಅವರು ಸದನಕ್ಕೆ ಬಂದು ಕುಳಿತಿರುತ್ತಾರೆ. ಆದರೆ ಬೇರೆಯವರು ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ವರದೇಗೌಡರು ಎಲ್ಲಿಗೆ ಹೋಗಿದ್ದಾರೆ ಎಂಬ ವಿಷಯ ತಮಗೇನಾದರೂ ತಿಳಿದಿದೆಯೇ? ಆಮೇಲೆ ರೇವಣ್ಣನವರು ಇವೊತ್ತು ರಾಜೀನಾಮೆ ಕೊಟ್ಟಿದ್ದಾರೆ ಎನ್ನಲಾಗಿದೆ. ಆ ವಿಷಯ ತಮಗೇನಾದರು ತಿಳಿದಿದೆಯೇ? ರೋಶನ್ ಬೇಗ್‌ರವರು ಎಲ್ಲಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ವರದೇಗೌಡರು ದೇವೇಗೌಡರಿಗೆ ವರದಿಯನ್ನು ಕೊಡುವುದಕ್ಕೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ವರದೇಗೌಡರೂ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎಂದು ಇವೊತ್ತು ಸುದ್ದಿ ಬಂದಿದೆ. ಅವರು ರಾಜೀನಾಮೆಯನ್ನು ಯಾರಿಗೆ ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆಯೇ? ಅಥವಾ ಅವರು ಸದಸ್ಯತ್ವಕ್ಕೇ ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ಈ ವಿಚಾರಗಳೇನೂ ನಮಗೆ ಸದನದಲ್ಲಿ ಗೊತ್ತಾಗುತ್ತಿಲ್ಲ. ಈ ಸಭೆಯನ್ನು ಅವರುಗಳಿಗೆ ಏನೆಂದು ತಿಳಿದುಕೊಂಡಿದ್ದಾರೋ ನನಗರ್ಥವಾಗಿಲ್ಲ. ಒಬ್ಬರಿಗೆ ಜವಾಬ್ದಾರಿಯುತವಾದ ಇಲಾಖೆಯನ್ನು ಕೊಟ್ಟಿರುವಾಗ ಅವರು ಇರಬೇಕು. ಅವರ ಕಾರ್ಯಾಲಯದ ಮುಂದೆ ಇಲಾಖೆಯಡಿ ನಾಮಫಲಕವನ್ನು ಇಟ್ಟಿದ್ದಾರೆ. ಆದರೆ ಆ ಮಂತ್ರಿಗಳು ಇಲ್ಲಿ ಇಲ್ಲ. ಅವರಿಗೆ ಸಂಬಂಧಪಟ್ಟ ಪ್ರಶ್ನೆ ಬಂದರೆ ಅದಕ್ಕೆ ಉತ್ತರವನ್ನು ಹೇಳುವವರು ಗತಿಯಿಲ್ಲ. ಇದಲ್ಲದೇ ರೇವಣ್ಣನವರು ಕಳೆದೆರಡುದಿನಗಳಿಂದ ಈ ಸದನಕ್ಕೆ ಬರುತ್ತಿಲ್ಲ. ಅನಂತಸಾಗ್‌ರವರು ನಿನ್ನೆಯ ದಿನ ಮಿಂಚಿನ ವೇಗದಲ್ಲಿ ಬಂದರು ಮತ್ತು ಮಿಂಚಿನ ವೇಗದಲ್ಲಿ ಹೊರಟುಹೋದರು. ಮುಖ್ಯಮಂತ್ರಿಗಳ ವ್ಯವಸ್ಥೆಗೆ ಹೊಂದಿಕೊಂಡಂತೆ ಎಂದು ಖಾತೆಯನ್ನು ವಹಿಸಿದ್ದೀರಿ. ಏನೇನು ವ್ಯವಸ್ಥೆಗಳು, ಇದರ ಬಗ್ಗೆ ನಾನು ಒಂದೇ ಸಮನೆ ಕೇಳುತ್ತಲೇ ಇದ್ದೇನೆ. ಆದೇನು ವ್ಯವಸ್ಥೆಗಳು, ಯಾವ ವಿಚಾರಗಳು, ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಇಲಾಖೆಗೆ ಅವರನ್ನು ವಹಿಸಿದ್ದೇವೆ ಎನ್ನಲಾಗಿದೆ. ಯಾವ ಇಲಾಖೆ ಅದು? ಏನಾದರೂ ಒಂದು ಅರ್ಜಿಯನ್ನು ನಾವು ಕೊಡ ಬೇಕೆಂದರೆ ಏನೆಂದು ಹೇಳಿ ನಾವು ಅವರಿಗೆ ಅರ್ಜಿಯನ್ನು ಕೊಡಬೇಕು? ಅನಂತಸಾಗ್‌ರವರು ಯಾವ ಇಲಾಖೆಗೆ ಸಚಿವರು ಎಂದು ಹೇಳಿ ನಾವು ಅರ್ಜಿ ಕೊಡಬೇಕು ಎಂಬುದನ್ನು ಹೇಳಿ. ಪ್ರವಾಸೋದ್ಯಮ ಇಲಾಖೆ ಸಚಿವರಾದ ರೋಷನ್ ಬೇಗ್‌ರವರು ಇಲ್ಲ.

ಉಪಾಧ್ಯಕ್ಷರು: ಅವರು ಅಧ್ಯಕ್ಷರು ಅನುಮತಿಯನ್ನು ಪಡೆದುಕೊಂಡಿದ್ದಾರೆ.

ಶ್ರೀಜೆ.ಸಿ. ಮಾಧುಸ್ವಾಮಿ: ಅವರುಗಳೆಲ್ಲರೂ ಬರುವವರೆಗೆ ನಮ್ಮಗಳಿಗಾದರೂ ಛಾರ್ಜ್ ಕೊಡಲಿ.

ಶ್ರೀ ವಾಟಾಳ್ ನಾಗ ರಾಜ್: ನಮೆಗೇನೂ ಬೇಡ. ನೀವೇ ಇರಿ. ಇನ್ನು ಐದಾರು ತಿಂಗಳಿದೆ, ನಮ್ಮದೇನೂ ಆಭ್ಯಂತರವಿಲ್ಲ. ಏನೇ ಬಂದರೂ ಕೂಡ ನಾವು ವಿರೋಧ ಪಕ್ಷದ ಕಡೆಯೇ ಇರುತ್ತೇವೆಯಾದ ಕಾರಣ ನೀವೇನೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಆದರೆ ಮಂತ್ರಿಗಳ ಗೈರು ಹಾಜರಿ ಬಗ್ಗೆ ಲಘುವಾಗಿ ಪರಿಗಣನೆ ಮಾಡಬಾರದು. ಉಪಾಧ್ಯಕ್ಷರೆ, ವರದೇಗೌಡರ ಬಗ್ಗೆ ಸದನದಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ವರದೇಗೌಡರು ಇನ್ನೂ ಸಚಿವರಾಗಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಹೇಳಬೇಕು.

ಇದಲ್ಲದೇ ರೇವಣ್ಣನವರು ಕಳೆದ ಮೂರು ದಿವಸಗಳಿಂದಸದನಕ್ಕೆ ಬರುತ್ತಿಲ್ಲ. ಇದಕ್ಕೆ ಕಾರಣವೇನು ಎಂಬ ಬಗ್ಗೆ ಹೇಳಬೇಕು. ಅನಂತನಾಗ್‌ರವರ ಬಗ್ಗೆಯೂ ಕೂಡ ಸ್ಪಷ್ಟವಾಗಿ ಹೇಳಬೇಕು. ರೋಶನ್‌ಬೇಗ್‌ರವರೂ ಕೂಡ ಇಲ್ಲ. ಇವರುಗಳೆಲ್ಲರೂ ಸದನದಲ್ಲಿ ಇಲ್ಲದೇ ಇದ್ದರೆ ಹೇಗೆ? ಯಾವುದೋ ಒಂದು ಅರಳಿಮರದ ಕೆಳಗಡೆ ಸದನ ನಡೆಸುತ್ತಿದ್ದಾರೆ ಎನ್ನುವ ಭಾವನೆ ಬರುವಾದಾದರೆ ಅದು ಒಳ್ಳೆಯ ಸೂಚನೆಯಲ್ಲ. ಹಿರಿಯ ಸಚಿವರಾದ ಬೈರೇಗೌಡರು ಇದ್ದಾರೆ. ಅವರೇ ಬೇಕಾದರೆ ಈ ಗೈರುಹಾಜರಿರುವವರ ಬಗ್ಗೆ ಕಾರಣಗಳನ್ನು ಹೇಳಲಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಯಾವುದೇ ಉತ್ತರ ಕೊಡದೇ ಈ ಸದನವನ್ನು ಕಗತ್ತಲಿನಲ್ಲಿಟ್ಟು ಹಾಗೆಯೇ ತಾವು ಮುಂದುವರಿಯದಾದರೆ ಇದೊಂದು ಅಪಾಯಕಾರಿಯಾದ ಬೆಳವಣಿಗೆಯಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಇಂದು ಬೆಳಿಗ್ಗೆ ಮಾನ್ಯ ಅಧ್ಯಕ್ಷರು ಬಹಳ ಸ್ಪಷ್ಟವಾಗಿ ಬಹಳ ಶುದ್ಧವಾದ ಭಾಷೆಯನ್ನು ಬಳಸಿ ಅವರ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಅವರು ಹೇಳಿದುದಕ್ಕಿಂತ ಮುಂದೆ ಹೋಗಿ ಇನ್ನೂ ಹೆಚ್ಚು ಹೇಳುವುದಕ್ಕೆ ನನ್ನ ಕೈಯಲ್ಲಿ ಸಾಧ್ಯವಿಲ್ಲ. ಈ ಸದನದಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳು ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದೇವೆ ಎಂಬ ಬಗ್ಗೆ ಅಧ್ಯಕ್ಷರು ಹೇಳಿದ್ದಾರೆ. ಆದುದರಿಂದ, ನಾನು ಅದರ ಬಗ್ಗೆ ಮತ್ತೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಗೈರು ಹಾಜರಿರುವ ಕೆಲವು ಮಂತ್ರಿಗಳ ಬಗ್ಗೆ ಮಾನ. ಸ್ನೇಹಿತರಾದ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರದಲ್ಲಿ ಉತ್ತರ ಕೊಡಬೇಕಾದವರು ಮಾನ್ಯ ಮುಖ್ಯ ಮಂತ್ರಿಗಳು. ಆದುದರಿಂದ ಅವರು ಇರತಕ್ಕಂಥ ಸಂದರ್ಭದಲ್ಲಿ ವಾಟಾಳ್‌ರವರು ಪ್ರಸ್ತಾಪ ಮಾಡಿದರೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೇ, ಎಂಟನೇ ತಾರೀಖು ಈ ಅಧಿವೇಶನ ಪ್ರಾರಂಭವಾಗಿದೆ. ಇವತ್ತು ದಿನಾಂಕ 23. ಈಗಾಗಲೇ 9-10 ದಿವಸ ಸದನ ನಡೆದಿದೆ. ಒಂದೇ ಒಂದು ದಿವಸ ಮಾನ್ಯ ವರದೇಗೌಡರು ಈ ಸಭೆಗೆ ಬರುತ್ತಿಲ್ಲವೆಂದು ಇಲ್ಲಿ ತಿಳಿಸಲಿಲ್ಲ. ಮಾನ್ಯ ರೋಷನ್‌ಬೇಗ್‌ರವರು ಎಲ್ಲೆ ಹೋಗಿದ್ದಾರೆಂದು ತಿಳಿಸಲಿಲ್ಲ. ರೇವಣ್ಣ ಅವರ ಕತೆ ಕಳೆದ ಮೂರು ದಿವಸ ಏನಾಯಿತು ಎಂದು ತಿಳಿಸಲಿಲ್ಲ. ಸಭೆಯನ್ನು if you cannot take into confidence, ಏನೂ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ: ಆ ವಿಚಾರದಲ್ಲಿ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಇರುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಒಳ್ಳೆಯದು. ಏಕೆಂದರೆ ಯಾರನ್ನು ಮಂತ್ರಿಯಾಗಿ ಇಟ್ಟು ಕೊಳ್ಳಬೇಕು, ಯಾರನ್ನು ಬಿಡಬೇಕು ಎನ್ನುವುದು ಅವರಿಗೆ ಸಂಬಂಧಪಟ್ಟದ್ದು, ಆದುದರಿಂದ, ಅವರು ಇರತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಅವರ ಮಾತನ್ನು ನಾನು ಸಮರ್ಥನೆ ಮಾಡುತ್ತಾ, ವರದೇಗೌಡರದು ವಾಹನ ಏನಿದೆ ಅದನ್ನು ಹಿಂದಕ್ಕೆ ತರಿಸಿಕೊಳ್ಳಬೇಕು. ಅವರಿಗೆ ಸಂಬಳ ಕೊಡಬಾರದು, ಅವರಿಗೆ ಭತ್ಯ ಕೊಡಬಾರದು. ಅವರು ಇಲ್ಲಿಗೆ ಬರದೇ ಇದ್ದಮೇಲೆ ರಾಜ್ಯದಲ್ಲಿ ಅವರು ಒಬ್ಬರು ಮಂತ್ರಿ ಅಲ್ಲ ಎನ್ನುವ ಅರ್ಥ ಇದ್ದ ಮೇಲೆ ಯಾರ್ಯಾರು ಈ ರೀತಿ ಇದ್ದಾರೆ, ಅವರು ರೇವಣ್ಣ ಇರಬಹುದು. ವರದೇಗೌಡರು ಇರಬಹುದು, ಅನಂತ್‌ನಾಗ್ ಇರಬಹುದು ಅಥವಾ

ಯಾರೆ ಇರಬಹುದು ನಾವು ಇಲ್ಲೆ ಶಾಸಕರಾಗಿ ಬಂದು ಸಹಿ ಹಾಕಿ ಕುಳಿತು ಕೊಳ್ಳುತ್ತೇವೆ. ಅವರು ಏನಾದರೂ ಸಹಿ ಹಾಕತಕ್ಕಂಥಾದ್ದು, ಈ ಸದನಕ್ಕೆ ಬರತಕ್ಕಂಥಾದ್ದು, ಏನಾದರೂ ಒಂದು ವ್ಯವಸ್ಥೆ ಶಿಷ್ಟಾಚಾರ ಆಗಬೇಕು. ಇಲ್ಲದಿದ್ದರೆ ಸರ್ಕಾರಿ ವಾಹನ ಬೇಕು, ಸರ್ಕಾರಿ ಬಂಗಲೆ ಬೇಕು, ಭತ್ಯೆಬೇಕು, ವ್ಯವಸ್ಥೆ ಬೇಕು, ಗೂಟದ ಕಾರು ಬೇಕು, ಕೆಂಪು ದೀಪ ಬೇಕು, ಎಲ್ಲಾ ವ್ಯವಸ್ಥೆಬೇಕು. ಆದರೆ ಸದನಕ್ಕೆ ಬರುವುದಿಲ್ಲವೆಂದರೆ ಹುಡಾಗಾಟವೇನು?

ಉಪಾಧ್ಯಕ್ಷರು: ಮಾನ್ಯ ಬೈರೇಗೌಡರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಈ ಪ್ರಶ್ನೆಯನ್ನು ಕೇಳಿ, ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ತಾವು ಅಧ್ಯಕ್ಷರಾಗಿರುವವರು, ತಾವು ಅವರಿಗೆ ಛೀಮಾರಿ ಹಾಕಿ. ಒಬ್ಬೊಬ್ಬರಿಗೆ ಹೆಸರು ಕರೆದು ಅವರಿಗೆ ಒಂದು ಛೀಮಾರಿ ಹಾಕಿ. ಇದು ಹೊಸ ಸಂಪ್ರದಾಯವಾಗಲಿ. ಇಂತಹ ಮಂತ್ರಿ ಇಂತಹ ಕಾರಣಕ್ಕೋಸ್ಕರ ಬರದೇ ಇರುವದಕ್ಕೆ ಈ ಸದನದಲ್ಲಿ ಛೀಮಾರಿ ಹಾಕುತ್ತೇವೆಂದು ಹೇಳಿ. ಈ ರಾಜ್ಯದ ಜನತೆಗೆ ಗೊತ್ತಾಗಲಿ.

ಶ್ರೀ ಮಲ್ಲಿಕಾರ್ಜುನಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಯಾರೇ ಒಬ್ಬರು ಸದಸ್ಯರು ಈ ಸದನಕ್ಕೆ 60 ದಿವಸ ಬರದೇ ಹೋದರೆ ಅವರ ಸದಸ್ಯತ್ವ ಹೋಗುತ್ತದೆ. 10 ದಿವಸಗಳಿಗಿಂತ ಹೆಚ್ಚು ಅಬ್ಸೆಂಟ್ ಆಗುವುದಾದರೆ ಅದಕ್ಕೆ ತಮ್ಮ ಅನುಮತಿಯನ್ನು ತೆಗೆದುಕೊಳ್ಳಬೇಕು.ಈಗ ಆ ಸದಸ್ಯರು ಮನೆಗೆ (ಸದನಕ್ಕೆ) ಬರುತ್ತಿಲ್ಲ. ಅವರು ಸಹಿಯನ್ನು ಮಾಡುವ ಹಾಗೆ ಇಲ್ಲ; because still he is a Minister. As a Minister, he is not coming to the House. leave of obsence ನೀವು ತೆಗೆದುಕೊಂಡಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಇಂತಿಂಥ ಕಾರಣಕ್ಕೆ ಬರುವುದಕ್ಕಾಗುವುದಿಲ್ಲವೆಂದು ಸಹ ಹೇಳಿಲ್ಲ. ನಿಮಗೂ ಕೂಡ ಮಾಹಿತಿ ಇಲ್ಲ. ಎಂದರೆ ಇವರು ಯಾವ ರೀತಿಯಾಗಿ ಸದಸ್ಯತ್ವದಲ್ಲಿ ಮುಂದುವರೆಯುತ್ತಾರೆ ? ಅಥವಾ ಇವರು ಏನು ಮಂತ್ರಿಯಾಗಿ ಮುಂದುವರೆಯುತ್ತಿದ್ದಾರೋ ಅಥವಾ ಕೇವಲ ಸದಸ್ಯತಾಗಿ ಮುಂದುವರೆಯುತ್ತಿದ್ದಾರೋ? ಸದಸ್ಯರಾಗಿ ಮುಂದುವರೆದರೆ 10 ದಿನಕ್ಕಿಂತಲೂ ಮೇಲ್ಪಟ್ಟು ಗೈರುಹಾಜರಿ ಇರುವುದಕ್ಕೆ ಬರುವುದಿಲ್ಲ. ಮಂತ್ರಿಯಾಗಿದ್ದರೂ ಕೂಡ 60 ದಿವಸಗಳು ಕಂಟಿನ್ಯೂಸ್ ಆಗಿ ಯಾವುದೇ ಒಂದು ಕಾರ್ಯಕಲಾಪದಲ್ಲಿ ಭಾಗವಹಿಸಿಲ್ಲ ಎಂದರೆ ಆ ಸ್ಥಿತಿ ಏನು? ಇದರ ಮೇಲೆ ರೂಲಿಂಗ್ ಕೊಡಬೇಕು.

ಶ್ರೀ ಚಂದ್ರಶೇಖರ್ ನಾಯಕ್: ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ನಾಳೆ ಸದನಕ್ಕೆ ಅವರು ಬರಲಿಲ್ಲವೆಂದರೆ 11 ಗಂಟೆಗೆ ತನಕ ನೋಡಿ 12.00 ಗಂಟೆಗೆ ಅವರ ನಾಮ ಫಲಕ ಎಲ್ಲಾ ಕಿತ್ತುಹಾಕುತ್ತೇವೆ. ಇವರು ಮಂತ್ರಿ ಅಲ್ಲವೆ ಎಂದು ತೀರ್ಮಾನವಾಗಬೇಕಲ್ಲ. ಕಾರ್ಯಾಲಯದ ಮುಂದೆ ಇವರು ನಾಮಫಲಕ ಇರಬೇಕು. ಸದನ ನಡೆಯುತ್ತಿದೆ. ಸದನಕ್ಕೆ ಇವರು ಬರೆದೇ ಇರುವದು, ಇದು ಅಗೌರವ. ಬೇರೆ ಮಾರ್ಗವೇ ಇಲ್ಲ. ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವ ವಿಚಾರವನ್ನು ನಾವು ಈ ಸಭೆಗ ತಿಳಿಸುತ್ತಿದ್ದೇವೆ. ಈಗ ಇದಕ್ಕೆ ತಾವು ತೀರ್ಪು ಕೊಡಬೇಕು.

ಶ್ರೀ ಚಂದ್ರಶೇಖರ್‌ನಾಯಕ್: ಮಾನ್ಯ ಉಪಾಧ್ಯಕ್ಷರೇ, ನಮ್ಮ ಪ್ರಶ್ನೆಗೆ ಉತ್ತರ ಕೊಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ: ತಾವೇನು ಆ ಪರಿಸ್ಥಿತಿಗೆ ಸಿಲುಕಿಸುವುದು ಬೇಡ. ನಾನಾಗಲೇ ತಿಳಿಸಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗಿದ್ದು, ಅವರ ಅಧಿಕಾರ ವ್ಯಾಪ್ತಿಗೆ ಇದು ಬರುತ್ತದೆ. ಅದಕ್ಕೋಸ್ಕರ ಅವರು ಇರತಕ್ಕಂಥ ಸಂದರ್ಭದಲ್ಲಿ ತಾವು ಪ್ರಸ್ತಾಪ ಮಾಡಿ ಎಂದು ಹೇಳುತ್ತಾ ಮಾನ್ಯ ಚಂದ್ರಶೇಖರ್ ನಾಯಕ್‌ರವರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಪಂಚಾಯತ್‌ರಾಜ್ಯ ಸಚಿವರು ಆದಂತಹ ಶ್ರೀಮಾನ್ ಪ್ರಕಾಶ್‌ರವರು ಆರೋಗ್ಯ ಸರಿ ಇಲ್ಲದೆ ಇರುವ ಕಾರಣ ಅನುಪಸ್ಥಿತಿಯಲ್ಲಿದ್ದಾರೆ. ಈ ವಿಚಾರವನ್ನು ನಮಗೂ ಕೂಡ ತಿಳಿಸಿದ್ದಾರೆ. ಇದಕ್ಕೆ ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಚಂದ್ರಶೇಖರ್‌ನಾಯಕ್ : ಈಗ ಬೋರ್ ಹೊಡೆಯುವಂತಹ ಕೆಲಸವಾದರೂ ಆಗಬೇಕು. ಈಗ ಬರುವಂತಾದ್ದು ಬೇಸಿಗೆ ದಿವಸಗಳು. ಯಾವುದಾದರೂ ಊರಿಗೆ ಹೋದರೆ ನಮಗೆ ನೀರು ಕಟ್ ಆಗಿದೆ, ಅದಕ್ಕೆ ಒಂದು ಬೋರ್ ಹೊಡೆಸಿಕೊಡಿ ಎಂದರೆ ನಾವು ಬೋರ್ ಹೊಡೆಸಿಕೊಡುವಂತಹ ಪರಿಸ್ಥಿತಿಯಲ್ಲಿ ಕೂಡ ಇಲ್ಲ.

ಉಪಾಧ್ಯಕ್ಷರು : ಶೂನ್ಯ ವೇಳೆಯಲ್ಲಿ ಕ್ಲಾರಿಫಿಕೇಷನ್‌ಗೆ ಅವಕಾಶ ಇಲ್ಲ. ಏಕೆ ಈ ರೀತಿ ಮಾಡುತ್ತೀರಿ?

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಉಪಾಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಬಹಳ ಗಮನವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಆದರೂ ಕೂಡ ನಾವು ಇಲ್ಲಿಯ ಪರಿಸ್ಥಿತಿ ಬಗ್ಗೆ ಹೇಳಬೇಕಾಗಿದೆ. ಇಲ್ಲಿ ನೊಣಗಳ ಕಾಟ ಬಹಳ ಆಗಿಹೋಗಿದೆ. ಇಲ್ಲಿ ಶುಚಿತ್ವ ಏಕೆ ಇಲ್ಲ. ಏಕೆ ಇಷ್ಟೊಂದು ಕಲುಷಿತ ಆಗಿಹೋಗಿದೆ ಎಂದುಗೊತ್ತಾಗುತ್ತಿಲ್ಲ. ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಮುಂದಿನ ಬೆಂಚಿನಲ್ಲಿ ಈ ಒಂದು ತಾಪತ್ರಯ ಇಲ್ಲ. ಹಿಂದಿನ ಬೆಂಚಿನಲ್ಲಿ ಬಹಳ ಆಗಿಹೋಗಿದೆ. ಇದೂ ಕಾಡ ಬಹಳ ಗಂಭೀರವಾದಂತಹ ವಿಚಾರ. ನಾವು ನೊಣ ಹೊಡೆಯುವುದಾ? ಅಥವಾ ಮಾತು ಕೇಳುವುದಾ? ನಾವು ಶುಚಿತ್ವದ ಬಗ್ಗೆ ಬಹಳ ಮಾತನಾಡುತ್ತೇವೆ. ಅದಕ್ಕೆ ಇಲ್ಲೇ ಆದ್ಯತೆ ಇಲ್ಲಎಂದರೆ ಇನ್ನು ಹೊರಗಡೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಇದು ಚರ್ಚೆ ವಸ್ತು ಅಲ್ಲ. ಒಪ್ಪುತ್ತೇನೆ ನಾನು. ನಾವು ಬೆಳಿಗ್ಗೆ 9-10 ನೊಣಗಳನ್ನು ಹೊಡೆದು ಹಾಕಿದ್ದೇವೆ. ಇದನ್ನು ಸದನದಲ್ಲಿ ಹೇಳಬಾರದು, ಮಾತಾನಾಡಬಾರದು ಎಂದು ಬಹಳ ಗೋಪ್ಯವಾಗಿ ಕುಳಿತಿದ್ದೆವು. ಅವುಗಳು ಈ ಸದನಕ್ಕೆ ಹೇಗೆ ಬಂತು? ಎಲ್ಲಿಂದ ಬಂತು? ಅವುಗಳು ಎಷ್ಟೆಷ್ಟು ದಪ್ಪ ಇದೆ, ಬಹಳ ದಪ್ಪ ಇವೆ.

ಶ್ರೀ ಡಿ.ವಿ. ಸದಾನಂದಗೌಡ : ನಾವು ಹೇಗೋ ನೊಣ ಹೊಡೆಯುವವರು.

ಉಪಾಧ್ಯಕ್ಷರು: ಹಣ್ಣಿನಲ್ಲಿ ಅಂಗಡಿ ಇರುವುದರಿಂದ ಅದರ ಸಲುವಾಗಿ ನೊಣಗಳು ಬರುತ್ತವೆ. ನಾಳೆ ಅದನ್ನು ಕ್ಲೋಜ್ ಮಾಡಿಸುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಹಾಪ್‌ಕಾಮ್ಸ್‌ನವರು ಹಣ್ಣು ಮಾರುತ್ತಿದ್ದಾರೆ, ಅದಕ್ಕೆ ಬಂದಿದೆ.

ಶ್ರೀ ಹೆಚ್.ಡಿ. ಬಸವರಾಜ್: ನಮ್ಮ ತೊಂದರೆಯನ್ನು ಅರ್ಥಮಾಡಿಕೊಳ್ಳಬೇಕು. ಸ್ಟೇ ಮಾಡಿಸಿ ಏನಾದರೂ ಮಾಡಿ. ಇಲ್ಲದಿದ್ದರೆ ತುಂಬಾ ಕಷ್ಟ ಇದೆ.

ಉಪಾಧ್ಯಕ್ಷರು: ಮಾಡಿಸುತ್ತೇವೆ .

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಉಪಾಧ್ಯಕ್ಷರೇ, ನಾವು ಸದನ ಮುಗಿದ ನಂತರ ವಾಪಸ್ಸು ನಮ್ಮ ಕ್ಷೇತ್ರಕ್ಕೆ ಹೋಗುತ್ತೇವೆ. ಆಗ ಜನ ವಿಧಾನ ಸಭೆಯಲ್ಲಿ ಏನು ಮಾಡಿದೆ ಎಂದು ಕೇಳುತ್ತಾರೆ. ನಾನು ಏನೂ ಮಾಡಲಿಲ್ಲವೆಂದರೆ ತಪ್ಪಾಗುತ್ತದೆ ಅಲ್ಲವೇ, ಅದಕ್ಕೆ ನೊಣ ಹೊಡೆದೆ ಎಂದು ಹೇಳಬಹುದು.

ಶ್ರೀ ಡಿ.ವಿ.ಸದಾನಂದಗೌಡ : ನೊಣ ಹೊಡೆಯುವುದಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡುವುದು.

ಆ) ದಿ: 10.3.99 ಬುಧವಾರ ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ವಾಚನಾಯಕನ ತಾಂಡದ ಮನೆಯೊಂದರಲ್ಲಿ ಸಂಭವಿಸಿದ ಭೀಕರ ಘಟನೆಯಿಂದ ನಾಲ್ಕು ಜನರ ಸಾವು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕೆ.ವಿರೂಪಾಕ್ಷಪ್ಪ ಅವರ ಪರವಾಗಿ): ಮಾನ್ಯ ಉಪಾಧ್ಯಕ್ಷರೇ, ದಿನಾಂಕ: 10.3.99ರಂದು ಬುಧವಾರ ಬೆಳಿಗ್ಗೆ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವಾಚನಾಯಕನ ತಾಂಡ ಮನೆಯೊಂದರಲ್ಲಿ ಸಂಭವಿಸಿದ ಭೀಕರ ಘಟನೆಯಿಂದ ಸುಮಾರು ನಾಲ್ಕು ಜನ ಮೃತಪಟ್ಟು ಹಲವಾರು ಮಂದಿ ಗಾಯಗೊಂಡಿದ್ದಾರೆ ಎನ್ನುವ ವಿಚಾರದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತಾ, ದೇವದುರ್ಗದಲ್ಲಿ ಬಾಂಬ್‌ನಿಂದ ಆಗದೆ ಎಂದು ಹೇಳುತ್ತಾರೆ, ಆದರೆ ಆದು ಯಾವ ರೀತಿಯಲ್ಲಿ ನಡೆಯಿತು ಎಂದು ಗೊತ್ತಾಗಲಿಲ್ಲ. ಆದರೆ ಒಂದು ಬಾವಿ ತೆಗೆಯುವುದಕ್ಕೆ ಕಲ್ಲನ್ನು ಒಡೆಯುವುದಕ್ಕೆ ತಂದಂತಹ ಮುದ್ದು ಹಾರಿ ಈ ರೀತಿಯಾಗಿದೆ ಎನ್ನುವುದು ಒಂದು. ಆದರೆ ಕೆಲವು ಜನ ಇಲ್ಲ ಬಾಂಬ್ ಇತ್ತು, ಅದು ಸ್ಫೋಟ ಆಗಿ ನಾಲ್ಕು ಜನ ತೀರಿದ್ದಾರೆ ಎಂದು ಹೇಳುತ್ತಾರೆ. ಅದಕ್ಕೆ ಈಗ ಅಲ್ಲಿ ಏನು ಕ್ರಮವನ್ನು ಸರ್ಕಾರ ಜರುಗಿಸಿದೆ? ಅಲ್ಲಿ ಸತ್ತಂತಹವರಿಗೆ ಏನಾದರೂ ಪರಿಹಾರ ಕೊಡುವಂತಹ ವ್ಯವಸ್ಥೆ ಮಾಡಿದ್ದೀರಾ? ಇರಿಗೇಶನ್ ಇಲಾಖೆಯ ನಿರ್ಲಕ್ಷತನದಿಂದ ಈ ರೀತಿ ಆಗಿದೆಯಾ? ಅಥವಾ ಮನೆ ಮಾಲೀಕರು ಅಥವಾ ಕಂಟ್ರಾಕ್ಟರ್ಸ್ ಅದನ್ನು ಇಟ್ಟು ಈ ಒಂದು ಕೂಲಿಕಾರರು ತೀರಿಹೋದರು. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಇದರ ಬಗ್ಗೆ ತಮ್ಮಲ್ಲಿರುವಂತಹ ಮಾಹಿತಿಯನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗೃಹಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಅವರ ಮೂಲಕ ಹೇಳಿಕೆಯನ್ನು ಕೊಡಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿಕೆಯನ್ನು ಕೊಡುತ್ತಾರೆ ಎಂದು ಹೇಳುತ್ತಿರುವುದು ಇದು ಮೂರನೇ ದಿವಸ. ಮೊನ್ನೆ ಎತ್ತಿದಾಗ ಮಾಹಿತಿ ತರಿಸಿಕೊಡುತ್ತೇವೆ ಎಂದು ಹೇಳಿ ನನ್ನೆಗೆ ಫೋಸ್ಟ್ ಫೋನ್ ಮಾಡಿದರು. ನಿನ್ನೆ ಹೇಳುವುದಕ್ಕೆ ಸಮಯ ಸಿಗಲಿಲ್ಲವೆಂದ ಇವತ್ತಿಗೆ ಫೋಸ್ಟ್ ಫೋನ್ ಮಾಡಿದರು. ಇವತ್ತು ಸದಸ್ಯರು ಕಾರ್ಯಕ್ರಮಕ್ಕೆ ಹೋಗಿದ್ದು ನನಗೆ ಕೊಟ್ಟು ಹೋಗಿದ್ದಾರೆ.

ಉಪಾಧ್ಯಕ್ಷರು: ಸಚಿವರು ಸ್ವೀಕರ್ ಜೊತೆ ಮೀಟಿಂಗ್ ಹೋಗಿದ್ದಾರೆ.